

# ನೆನಪುಗಳೆಂಬ ಸೌಗಂಧಿಕಾ

■ ಸಂತೋಷ್ ಅನಂತಪುರ

ಮನೆಯೊಂದು ಮೂರು ಬಾಗಿಲೆಂಬ ಮಾತಿಗೆ ಪೂರಕವಾಗಿರುವ ಇಂದಿನ ಮನೆಗಳು, ಕಲ್ಲು–ಜಲ್ಲಿ–ಸಿಮೆಂಟಿನ ಗೂಡಿನೊಳಗೆ ಭಾವವಿಲ್ಲದ ನಿರ್ಜೀವಗಳು. ಭಾವಲೇಪವಿಲ್ಲದ ಬಣ್ಣಗಳ ಮೆರವಣಿಗೆ. ಕಾಟಾಚಾರಕ್ಕೆ ಲೋಕಾಭಿರಾಮದ ಮಾತು. ಧುತ್ತೆಂದು ಆವರಿಸಿಕೊಳ್ಳುವ ನೀರವಮೌನ. ತನ್ನದೇ ವೃತ್ತದೊಳಗೆ ಸಂಚಾರ. ಆಗೊಮ್ಮೆ ಈಗೊಮ್ಮೆ ಹುಟ್ಟಿಕೊಂಡು ಸಾಯುವ ಸ್ವಗತ. ಒಂದೊಮ್ಮೆ ಕಕ್ಷೆ ಬದಲಿಸಿದರೆ ಆಗಬಾರದ ಅನಾಹುತವಾಯಿತೆನ್ನುವ ಹುಯಿಲು. ಒಳಗೂ ಹೊರಗೂ ಬಯಲು–ಆಲಯಗಳ ಸವಾರಿ. ಹುಚ್ಚು ಕನವರಿಕೆಗಳು.

ನೀಲನಭದ ಕೆಳಗೆ ಅಂಗಾತ ಮೈಚಾಚಿ ನಿದ್ರಿಸುವ ಕನಸು ಕಾಣುತ್ತಲೇ ಬಿಗುಮಾನವನ್ನಪ್ಪಿ ನಿದ್ರೆಗೆ ಜಾರುವ ಇಂಗಿತ. ಕಾಳಜಿ ಬೇಕಿಲ್ಲದ ಬಾಳು. ಕಳಾಹೀನ ಮುಖ. ಕರ್ತವ್ಯಕ್ಕೆ ಚ್ಯುತಿಯಿಲ್ಲ. ಹಾಗಂತ ಭಾವನೆಯ ಒರತೆ ಚೂರೂ ಇಲ್ಲ. ಬೋಲ್ಟು ನಟ್ಟುಗಳಿಂದ ಕೂಡಿದ ಭಾವಹೀನ ಯಂತ್ರದಂತೆ ನಿತ್ಯದ ಕಾಯಕ. ಪಾಲನೆ–ಪೋಷಣೆ ಎಲ್ಲವೂ ಸಮಯಾನುಸಮಯಕ್ಕೆ ಪಕ್ಕಾ. ಸುರಿವ ಭಾವಕ್ಕೆ ಒಡ್ಡುಕಟ್ಟುವ ವಿಫಲಯತ್ನ. ಭಾವನೆಯನ್ನು ಹರಿಯಗೊಡದೆ ಸಹಜವಾಗಿದ್ದೇವೆಂದು ಬಿಂಬಿಸಿಕೊಳ್ಳುವ ಹುಚ್ಚು ಸಾಹಸ. ಬದುಕಿನ ಸಣ್ಣ ಸಣ್ಣ ಸಂಭ್ರಮವನ್ನು ಅನುಭವಿಸಬೇಕಿದ್ದರೆ ತುಸು ಅಸಹಜವಾಗಿರಬೇಕೆಂದು ಕೆಚ್ಚಿನಿಂದ ಹೇಳುವ ಒಳಮನಸ್ಸು. ಆದರೂ ಯಾವುದನ್ನೂ

ಯೋಜನ ಯೋಜನ ದೂರದಿಂದಲೂ ತೀಡಿಬರುವ ದೇವಪುಷ್ಪದ ದಿವ್ಯ ಪರಿಮಳದಂತೆ ನೆನಪುಗಳು ಅನುಕ್ಷಣವೂ ನಮ್ಮನ್ನು ಹಿಂಬಾಲಿಸುತ್ತವೆ. ಬದುಕಿದ ರೀತಿಯನ್ನು ವಿಮರ್ಶಿಸುವ, ಬದುಕಬೇಕಾದ ಬಗೆಯನ್ನು ಕಟ್ಟಿಕೊಡುವ ನೆನಪುಗಳಿಲ್ಲದೆ ಲೋಕವುಂಟೆ? ಈ ನೆನಪುಗಳ ಸುಗಂಧ ವರ್ತಮಾನವನ್ನು ಸಹ್ಯಗೊಳಿಸಲು, ಭವಿಷ್ಯದ ಬಗ್ಗೆ ನಿರೀಕ್ಷೆ ಉಳಿಸುವುದು ಅನಿವಾರ್ಯ, ಅಗತ್ಯ.

ವ್ಯಕ್ತಪಡಿಸಲಾಗದೆ ಒಳಗೊಳಗೇ ಭುಗಿದೇಳುವ ಕಿಚ್ಚು. ಕೆಚ್ಚು–ಹುಚ್ಚು–ಕಿಚ್ಚನ್ನು ಹಿಡಿದು ಜಗ್ಗಾಡುವ ಹೃದಯ–ಮನಸ್ಸು. ಭ್ರಮೆ–ವಾಸ್ತವಗಳಿಗೆ ಅತಿ ಭಾವುಕತೆಯ ಲೇಪ. ಪರಿಣಾಮ ಭಾರೀ ಭಾವನೆಯ ಲೋಪ. ಜಗ್ಗಾಟಕ್ಕೆ ಅಳಿವುಂಟು, ಭಾವನೆಗಳಿಗೆ ಅಳಿವಿಲ್ಲವೆಂಬ ಸರಳಸೂತ್ರವನ್ನೂ ಅರಿಯದೆ ಉಸಿರಾಡುವ ಜೀವ ನಾನು ಮತ್ತು ನನ್ನದು ಎಂಬ ನರಕದೊಳಗೆ ಬಿದ್ದು ನರಳುತ್ತಿರುವ ಈ ಕಾಯ ನಿನಗೇ ಅರ್ಪಿತ ಸ್ವಾಮಿ. ಈಗ ಹೇಳಿ ನಮ್ಮೊಳಗನ್ನು ಶೋಧಿಸಲು ಇದು ಸರಿಯಾದ ಸಮಯವಲ್ಲವೇನು?

ಮಾತು ಭಾರವಾಗದೆ ಭಾವ ಭಾರವೆನಿಸಿಕೊಳ್ಳಬೇಕಿದೆ. ಬಂಧಗಳೊಡಗೂಡಿ ಅನುಭವಿಸುವ ಕಷ್ಟ ಸುಖಗಳಿಂದು ನಿರ್ದಿಷ್ಟ ವರ್ತುಲಕ್ಕೆ ಸೀಮಿತಗೊಂಡಿದೆ. ಮನಸ್ಸು ಮತ್ತು ಹೃದಯಗಳ ಸಮತೋಲನವಿರುವುದಿಲ್ಲ. ಹೃದಯ ತಿಳಿಸುವುದೇ ಒಂದು, ಮನಸ್ಸು ಹೇಳುವುದೇ ಇನ್ನೊಂದು. ನಾಲಗೆಗೂ ಬುದ್ಧಿಗೂ ನಡುವೆ ಇರುವ ಕೊಂಡಿಯೊಂದು ಕಳಚಿಬಿದ್ದಿರುತ್ತದೆ. ಅಷ್ಟಕ್ಕೇ ಜೊತೆ ಜೊತೆಯಲಿ, ಖುಷಿ ಖುಷಿಯಲಿ ನಲಿಯುವ ನಲಿವುಗಳೆಲ್ಲಾ ಚೆಲ್ಲಿ ಚದುರಿ ಹೋಗಿರುತ್ತವೆ. ಹುಡುಕುವ ಕಾರ್ಯಕ್ಕೆ ಮುಂದಾಗುತ್ತೇವೆ. ಆದರದು ಅಲ್ಲೇ ಪಕ್ಕದಲ್ಲಿ ಗುಟುಕು ಜೀವವನ್ನು ಹಿಡಿದುಕೊಂಡು ಬಿದ್ದಿರುತ್ತದೆಂಬ ಕಲ್ಪನೆಯೂ ಇಲ್ಲದೆ ಕತ್ತನ್ನು ನೀಳವಾಗಿಸಿ ದೇಹದಿಂದ ಹೊರಕ್ಕೆ ಚಾಚಿ ನಲಿವುಗಳೆಲ್ಲಿ ಹೋದವೆಂದು ಮತ್ತೆ ಮತ್ತೆ ಹುಡುಕುತ್ತಿರುತ್ತೇವೆ.

ಅರೆ...! ಬನ್ನಿ ನಲಿವುಗಳೇ ಬನ್ನಿ
ಬತ್ತಿದ ಬಾವಿಯ ಒರತೆಯ ಚಿಮ್ಮಿಸಲು ಬನ್ನಿ
ಕಾರಣ ಕೇಳದೆ ಹೇಳದೆ ಬನ್ನಿ
ಬೊಗಸೆ ತುಂಬಾ ಪ್ರೀತಿಯ ತನ್ನಿ
ಇಲ್ಲಿ ಬನ್ನಿ ನಲಿವುಗಳೇ ಬನ್ನಿ
ಜೊತೆಗೊಂದಿಷ್ಟು ಕನಸುಗಳ ಹೊತ್ತು ತನ್ನಿ

ಅಂತೂ ಬಂದೇ ಬಿಟ್ಟಿರಿ. ಆದರೆ ನಿಮ್ಮನ್ನೆಲ್ಲಿ ಕೂರಿಸುವುದೆನ್ನುವ ದ್ವಂದ್ವವು ಹೃದಯ–ಮನಸ್ಸಿನ ಸಂಘರ್ಷಕ್ಕೆ ನಾಂದಿ ಹಾಡುತ್ತದೆ. ಕರಗಳ ತೆರೆದು ಸ್ವೀಕರಿಸಿ ಅನುಭವಿಸಲೂ ಆಗದಂತಹ ಸ್ಥಿತಿಯ ನಿರ್ಮಾಣವಾಗಿರುತ್ತದೆ. ನಲಿವುಗಳನ್ನು ಒಂದಿಷ್ಟು